## ಕನ್ನಡತಿ ನೋಡಿ ಕಲಿಯಲಿ

ಕೊರೊನಾದಿಂದ ಟೀವಿ ಕಡೆ ಗಮನ ಹೆಚ್ಚಾಗಿದೆ. ಕಲರ್ಸ್‌ನ 'ಕನ್ನಡತಿ'ಯ ಸುಂದರ ಸಂಭಾಷಣೆ, ಔಚಿತ್ಯಪೂರ್ಣ ಪ್ರೇಮ ಸಲ್ಲಾಪ ನೋಡಲು ಹಿತವೆನಿಸುತ್ತದೆ. ಭುವಿ ತಂಗಿ, ಹರ್ಷನ ತಂಗಿಯರ ತುಂಟತನದ ಸಂಭಾಷಣೆ ಕೇಳುವಂತಿದೆ. ಇಂತಹ ಚೆಂದದ ಸೀರಿಯಲ್ಲೂ ಎಡವಿ ತಪ್ಪುವುದುಂಟು.

'ಗೀತಾ' ಧಾರಾವಾಹಿಯಲ್ಲಿ ಮಂತ್ರಿಗಳ ಮನೆಗೆ ಬೀಡುಬೀಸಾಗಿ ಯಾರು ಬೇಕಾದರೂ ಒಳಹೊಗಲು ಬಾಗಿಲು ತೆರದಿರುತ್ತದೆಯೇ? ಸೆಕ್ಯೂರಿಟಿ ಇಲ್ಲದ ಈ ಮಂತ್ರಿ ಮನೆ ಛತ್ರದಂತೆ ಆಗಿದೆಯೇ? 'ಮಂಗಳ ಗೌರಿ'ಯ ಎಸ್.ಪಿಗೆ ಸರ್ವಸ್ವವೂ ನೆನಪಿರುತ್ತದೆ. ತನ್ನ ಹೆಂಡತಿಯನ್ನು ಮಾತ್ರ ಮರೆಯುತ್ತಾನೆ.

ಝೀ ಕನ್ನಡದ 'ಜೊತೆ ಜೊತೆಯಲಿ' ಮೊದಲಿನ ಸೊಗಡು ಕಳೆದುಕೊಂಡು ಅನುಮಾನದ ಪ್ರಶ್ನೆಗಳ ಸುಳಿಯಲ್ಲಿ ಪ್ರೇಕ್ಷಕರಿಗೆ ಬೇಸರ ತರಿಸಿದೆ. 'ಬ್ರಹ್ಮ ಗಂಟು'ಗೆ ಮಾತ್ರ ದೇವರೇ ಗತಿ. ರಿಮೋಟ್ ನಮ್ಮ ಕೈನಲ್ಲೇ ಇರುವುದರಿಂದ ಟೀವಿ ಆರಿಸಿದರೆ ಕಂತುಗಳು ನಿಲ್ಲಿಸಬಹುದು. ಬೇರೆ ಧಾರಾವಾಹಿಯವರು 'ಕನ್ನಡತಿ'ಯನ್ನು ನೋಡಿ ಕಲಿಯಲಿ.

–ಟಿ.ಎಂ. ಶಿವಶಂಕರ್, ಬೆಂಗಳೂರು

## ಸೂರ್ಯಕಾಂತಿಯಲ್ಲಿ ಡಿ ವಿಟಮಿನ್!

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ವಿಟಮಿನ್ 'ಡಿ' ಕುರಿತು ಸಲಹೆ ನೀಡುತ್ತಾ ಅತಿಥಿಯೊಬ್ಬರು ವಿಟಮಿನ್ ಡಿ ಸಿಗುವುದು ಸೂರ್ಯನಿಂದ. ಸೂರ್ಯಕಾಂತಿ ಹೂವು ಸದಾ ಸೂರ್ಯನ ಕಡೆಗೆ ತಿರುಗುತ್ತದೆ, ಸೂರ್ಯನ ಶಕ್ತಿ ಎಲ್ಲ ಅದರ ಬೀಜದಲ್ಲಿ ಶೇಖರವಾಗಿರುತ್ತದೆ. ಆದ್ದರಿಂದ ಈ ಬೀಜವು ವಿಟಮಿನ್ ಡಿ ಪಡೆಯಲು ಉತ್ತಮ ಮೂಲ ಅಂದರು. ಇಂತಹ ಅವಿವೇಕತನವನ್ನು ವೈಜ್ಞಾನಿಕ, ಸುಜ್ಞಾನವೆಂದು ಹೇಳುವ ಮುನ್ನ ಕನಿಷ್ಠ ಪರಿಶೀಲನೆಯನ್ನೂ ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಹತ್ತಾರು ಜನರಲ್ಲಿ ಯಾರೂ ಮಾಡದಿರುವುದು ನಮ್ಮ ಇಂದಿನ ವಿಚಾರಶಕ್ತಿಗೆ ಕನ್ನಡಿ ಹಿಡಿದಂತಿದೆ. ಆಯುರ್ವೇದದ ಹೆಸರಿನಲ್ಲಿ ಏನ್ನನ್ನೇ ಹೇಳಿದರೂ ಕೇಳುತ್ತಾರೆ, ಟೀವಿ ಪರದೆಯನ್ನು ಸೀಳಿ ಯಾರೂ ಮರುಪ್ರಶ್ನೆ ಮಾಡಲಾರರು ಎಂಬ ಭಂಡತನವೂ ಇದಕ್ಕೆ ಕಾರಣ.

–ವಿನಯ್ ಎಂ.ಎಸ್., ಬೆಂಗಳೂರು

ವಾರದ ಪತ್ರ

## ಶಾಂತಿಯೇ ಇಲ್ಲ, ಎಲ್ಲ ಪಾಪವೇ

ಕಲರ್ಸ್ ಕನ್ನಡದ 'ಶಾಂತಂ ಪಾಪಂ' ವೀಕ್ಷಕರಿಗೆ ಏನು ಪ್ರಯೋಜನವೋ ತಿಳಿಯುತ್ತಿಲ್ಲ. ಅಷ್ಟಕ್ಕೂ ಈ ಧಾರಾವಾಹಿಯ ಉದ್ದೇಶವೂ ಸ್ಪಷ್ಟವಾಗಿಲ್ಲ. ಇದರಲ್ಲಿ ಅಪರಾಧ ಪ್ರಕರಣ ನಡೆದಿದ್ದನ್ನು ಹೇಳುತ್ತಾರೋ ಅಥವಾ ಹೀಗೆ ಅಪರಾಧ ಮಾಡಬಹುದು ಎಂದು ಮಾರ್ಗದರ್ಶನ ನೀಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಅಲ್ಲದೆ ತೋರಿಸುವುದನ್ನು ಅತೀ ಎನ್ನುವಂತೆ ಬಿಂಬಿಸುತ್ತಾರೆ. ಎಲ್ಲಾ ಧಾರಾವಾಹಿಗಳಿಗೆ ಒಂದಲ್ಲಾ ಒಂದು ರೀತಿಯ ಅಂತ್ಯ ಇರುತ್ತದೆ. ಆದರೆ ಇದಕ್ಕೆ ಕೊನೆಯೇ ಇಲ್ಲ. ಮಕ್ಕಳಿಗೆ ಇದನ್ನು ತೋರಿಸಿದರೆ ಮುಗಿದೇ ಹೋಯಿತು. ಮಕ್ಕಳೂ ನೋಡಬಹುದಾದ ಸಮಾಜಮುಖಿ ಜವಾಬ್ದಾರಿಯ ಧಾರಾವಾಹಿಗಳು ಪ್ರಸಾರವಾಗಲಿ ಎನ್ನುವುದು ನನ್ನ ಆಸೆ.

–ಶ್ವೇತಾ ಮಹೇಶ್

## ವೀಕ್ಷಕರನ್ನೇ ಪ್ರಶ್ನಿಸುವ ಸುದ್ದಿವಾಹಿನಿಗಳು

ಸುದ್ದಿ ವಾಹಿನಿಗಳಲ್ಲಿ ಕೊರೊನಾ ಎರಡನೇ ಅಲೆಯ ಸುದ್ದಿ ಶೈಲಿ ಎಳ್ಳಷ್ಟೂ ಬದಲಾಗಲೇ ಇಲ್ಲ. ವೀಕ್ಷಕರಿಗೇ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸುವುದು ತೀವ್ರ ಹಾಸ್ಯಾಸ್ಪದ. 'ಭಿನ್ನರಿಂದ ರಾಜ ಹುಲಿಯ ಖುರ್ಚಿ ನಿಜಕ್ಕೂ ಅಲ್ಲಾಡ್ತಾ ಇದೆಯಾ?' 'ಸೈನಿಕನ ತಲೆದಂಡ ಪಕ್ಕಾನಾ?' 'ಕೈ ಪಾಳಯಕ್ಕೆ ಸಿಕ್ಕೇ ಬಿಟ್ಟಿತಾ ಛಾನ್ಸು?' 'ಜೂನ್ 30ರವರೆಗೂ ಲಾಕ್ ಡೌನ್ ವಿಸ್ತರಣೆ ಪಕ್ಕನಾ?' 'ಬೆಂಗಳೂರಿಗೆ 30ರವರೆಗೆ ಕಠಿಣಾತಿ ಕಠಿಣ ಲಾಕ್ ಡೌನ್ ವಿಸ್ತರಣೆ ಫಿಕ್ಸ್ ಆಗೇ ಬಿಟ್ಟಿತಾ?' 'ಬ್ಲಾಕ್ ಫಂಗಸ್ ನಿಂದ ಸಾವು ಪಕ್ಕನಾ?' 'ಇತ್ತೀಚೆಗೆ ನಡೆದ ಗ್ಯಾಂಗ್ ರೇಪ್‌ನಲ್ಲಿ ಪೊಲೀಸರು ಶೂಟ್ ಮಾಡಿದ್ದಾದರೂ ಏಕೆ?' 'ಜೂನ್‌ನಲ್ಲಿ ರಾಜಧಾನಿಗೆ ಕಾಡಲಿದೆಯಾ ಕಂಡು ಕೇಳರಿಯದ ಕಂಟಕ?' ಇತ್ಯಾದಿ... ದಿನ ಪೂರ್ತಿ ಪಕ್ಕಾನಾ? ಏಕೆ? ಹೇಗೆ? ಫಿಕ್ಸಾ? ಆಗಬಹುದಾ? ಅಂತ ನಮ್ಮನ್ನೇ ಕೇಳ್ತಾನೆ ಇರ್ತೀರಿ. ಬಡ ವೀಕ್ಷಕರಿಗೆ ಅದು ಹೇಗೆ ಗೊತ್ತಾಗಬೇಕು?

–ಆರ್. ವೀರೇಶ್ ಕುಮಾರ್, ಬೆಂಗಳೂರು

## ತರ್ಕವಿಲ್ಲದ ಚಿತ್ರಕಥೆ

ಕಲರ್ಸ್ ಕನ್ನಡದ 'ಗೀತಾ' ಧಾರಾವಾಹಿಯಲ್ಲಿ ತರ್ಕವಿಲ್ಲದ ಚಿತ್ರಕಥೆಯನ್ನು ಹೆಣೆಯುತ್ತಿದ್ದಾರೆ. ಸೂರ್ಯಪ್ರಕಾಶ್ ದೊಡ್ಡ ಬಂಗಲೆಯುಳ್ಳ ರಾಜಕಾರಣಿ. ಗೀತಾ ಯಾರಿಗೂ ಗೊತ್ತಾಗದಂತೆ ವಿಜಯ್‌ನ ಬೆಡ್ ರೂಂಗೆ ಹೋಗುತ್ತಾಳೆ. ಇನ್ನೂ ಶ್ರೀನಿವಾಸನಿಗೆ ಬಿ.ಪಿ. ಏರಿದಾಗಲೆಲ್ಲ ಮಿನಿಸ್ಟರ್ ಮನೆಗೆ ಹೋಗಿ ಅವಾಜ್ ಹಾಕುತ್ತಾರೆ.

ಧಾರಾವಾಹಿ ಶುರುವಾದಾಗಿನಿಂದ ಮಿನಿಸ್ಟರ್ ಬಂಗಲೆಗೆ ಕಾವಲುಗಾರರಿಲ್ಲವೇ? ಒಂದು ವೇಳೆ ಗೀತಾ ತಡರಾತ್ರಿಯಲ್ಲಿ ಬಂಗಲೆಗೆ ಹೋಗಿದ್ದಾಳೆಂದರೆ, ಕಾಂಪೌಂಡಿಗೆ ಗೇಟ್ ಇಲ್ಲವೇ? ಇನ್ನೂ ವಿಚಿತ್ರ ಎಂದರೆ ಪತ್ರಕರ್ತನೊಬ್ಬ ಮಿನಿಸ್ಟರ್‌ಗೆ ಸತ್ಯದ ಗುಟ್ಟನ್ನು ಹೇಳಲು ಹೋಗುವ ಸಂದರ್ಭದಲ್ಲೆಲ್ಲ ಮಿನಿಸ್ಟರ್ ಪಿಎ ತಡೆಯುತ್ತಾರೆ ಇಂತಹ ಅಭಾಸಗಳೇಕೆ?

–ಮಂಜುನಾಥ್ ಜೆ. ಹಗರಿಬೊಮ್ಮನಹಳ್ಳಿ

## ಇದೂ ಸೇರಲಿ

ಚಂದನದ 'ಥಟ್ ಅಂತ ಹೇಳಿ' ಉತ್ತಮ ಕಾರ್ಯಕ್ರಮ. ಡಾ. ನಾ. ಸೋಮೇಶ್ವರ ಅವರ ಸ್ಪಷ್ಟ ನುಡಿ, ನಿರೂಪಣೆ, ವಿಷಯ ವೈವಿಧ್ಯದ ಪ್ರಶ್ನೆಗಳು ಕಾರ್ಯಕ್ರಮಕ್ಕೆ ಮೆರುಗು ನೀಡುತ್ತಿವೆ. ಚಿತ್ರಾವಳಿಯ ಪ್ರಶ್ನೆಗಳ ಸರಣಿಯಲ್ಲಿ ಸ್ವಾತಂತ್ರ್ಯ ಚಳವಳಿಯ ನೇತಾರರ, ಖ್ಯಾತ ರಾಜರ ಹಾಗೂ ಕಲಾವಿದರ ಚಿತ್ರಗಳಿಗೂ ಅವಕಾಶ ಇರಲಿ. ಕೆಲವು ಪದಗಳನ್ನು ಪದೇಪದೇ ಪುನರುಚ್ಚರಿಸುವುದರಿಂದ ಏಕತಾನತೆ ಅನಿಸಬಹುದು. ಸ್ವಲ್ಪ ಮಾತಿನ ಶೈಲಿ ಬದಲಾಯಿಸಿದರೆ ಒಳಿತೆಂದು ನಮ್ಮಲ್ಲಿ ಕೆಲವರ ಅಭಿಪ್ರಾಯ.

–ಸುಶೀಲಾ ಆರ್.ರಾವ್, ಉಡುಪಿ

## ಮೊಸರಿನಲ್ಲಿ ಕಲ್ಲು ಸಿಕ್ಕಂತೆ

ಟೀವಿ ಧಾರಾವಾಹಿಗಳಿಗೆ ಕಳೆ ಬರಬೇಕೆಂದರೆ ಖಳ ನಾಯಕಿ– ನಾಯಕರಿಂದ ಮಾತ್ರ ಸಾಧ್ಯ ಎಂಬುದು ಕಥೆಗಾರರ ನಂಬಿಕೆ ಇದ್ದಂತಿಗೆ.

ಆದರೆ, ಅದು ಶುದ್ಧ ಸುಳ್ಳು. ಒಂದು ಧಾರಾವಾಹಿ 3ರಿಂದ 5 ವರ್ಷ ಪ್ರಸಾರವಾಗುತ್ತದೆ ಅಷ್ಟು ದಿನವೂ ಅದೇ ರೀತಿ ನೋಡುವ ಕರ್ಮ ವೀಕ್ಷಕನಿಗೆ ಬರಬಾರದು.

ಉದಾಹರಣೆ: ಕಲರ್ಸ್ ಕನ್ನಡದ 'ಹೂ ಮಳೆ'ಯಲ್ಲಿ ಕೆನಡಾದಿಂದ ಬಂದಂತಹ ಚಿಕ್ಕಮ್ಮನ ಪಾತ್ರಧಾರಿಣಿಯ ಹಾವ, ಭಾವ, ಮಾತು ನಿಜಕ್ಕೂ ಹೇಸಿಗೆ ಬರುವಂತಿತ್ತು. ಇನ್ನು 'ಗೀತಾ'ಳ ಬಾನು, 'ಗಿಣಿ ರಾಮ'ದ ಶಿವನ ತಾಯಿ, 'ನನ್ನರಸಿ ರಾಧೆ'ಯ ಮೀನಾಕ್ಷಿ ಹಾಗೂ ಇಂಚಾರಳ ಅತ್ತೆ ಮೋಹಿನಿಯರು ಟೀವಿ ಪರದೆಯ ಮೇಲೆ ಕಾಣಿಸಿಕೊಂಡರೆ ಮೊಸರಿನಲ್ಲಿ ಕಲ್ಲು ಸಿಕ್ಕಂತೆ ಆಗುತ್ತದೆ. ಇವರಿಗೆಲ್ಲ ಒಳ್ಳೆಯ ನಡವಳಿಕೆ ಕೊಟ್ಟು ವೀಕ್ಷಕರ ತಾಳ್ಮೆಗೆ ಸುಖ ಸಿಗುವಂತೆ ಮಾಡಲಿ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಯಾರು ಹಿತವರು?

ಸುದ್ದಿ ವಾಹಿನಿಗಳಲ್ಲಿ ಸುದ್ದಿಯನ್ನು ಓದುವವರಲ್ಲಿ ಕೆಲವರು ತಮ್ಮನ್ನು ತಾವು ಬೃಹಸ್ಪತಿಗಳು ಎಂದು ಭಾವಿಸುತ್ತಾರೆ. ಮತ್ತೆ ಕೆಲವರು ತಾವು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಂತೆ ವರ್ತಿಸುತ್ತಾರೆ. ಇನ್ನುಳಿದವರು ಡಂಗೂರ ಸಾರುವವರಂತೆ ಏರು ದನಿಯಲ್ಲಿ ಕಿರುಚುತ್ತಾ ಶಬ್ದ ಮಾಲಿನ್ಯ ಉಂಟುಮಾಡುತ್ತಾರೆ. ಯಾರು ಹಿತವರು ನಿಮಗೆ ಈ ಮೂವರೊಳಗೆ?

–ಪಿ.ಜೆ. ರಾಘವೇಂದ್ರ ಮೈಸೂರು